ಕನ್ನಡಪ್ರಭ
ಮಂಗಳವಾರ 21.01.2025

# ಎಟಿಎಂಇ ಕಾಲೇಜಿಗೆ ಎನ್‌ಎಬಿಎಲ್ ಮಂಡಳಿಯ ಮಾನ್ಯತೆ

ಮೈಸೂರು: ಮೈಸೂರು- ಬನ್ನೂರು ರಸ್ತೆಯಲ್ಲಿ ರುವ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿ ಗೆ ಎನ್ ಎಬಿಎಲ್ ಮಂಡಳಿಯ ಮಾನ್ಯತೆ ಸಿಕ್ಕಿದೆ.

ದೊಡ್ಡದೊಡ್ಡಕಟ್ಟಡ, ರಸ್ತೆ ನಿರ್ಮಾಣ ಮೊದಲಾದವುಗಳ ವೇಳೆ ಮಣ್ಣು, ಬಳಸುವ ವಸ್ತುಗಳ ಗುಣಮಟ್ಟ ಪರೀಕ್ಷೆ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯವಾಗಿದೆ. ಈ ನಿಟ್ಟಿನಲ್ಲಿ ಅಂತಹ ಸುಮಾರು 50 ಪರೀಕ್ಷೆ ನಡೆಸಿ ಪ್ರಮಾಣ ಪತ್ರ ನೀಡಲು ಎಟಿಎಂಇ ಎಂಜಿನಿಯರಿಂಗ್ ಕಾಲೇಜಿಗೆ ಮಾನ್ಯತೆ ದೊರೆತಿದೆ ಎಂದು ಪ್ರಾಂಶುಪಾಲ ಡಾ.ಎಲ್. ಬಸವ ರಾಜು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿ ದಂತೆ ಮಾನ್ಯತೆ ನೀ ಡುವ ಎನ್‌ಎಬಿಎಲ್ ಮಂಡಳಿ ತಮ್ಮ ಕಾಲೇಜು ಪ್ರಮಾಣಪತ್ರ ನೀಡಿದೆ. ಹೀಗಾಗಿ, ಮುಡಾ, ಖಾಸಗಿ, ಲೋಕೋಪಯೋಗಿ ಮೊದಲಾದ ಇಲಾಖೆಗಳು ಮಾತ್ರವಲ್ಲದೆ, ಪಿಎಚ್.ಡಿ ಅಧ್ಯಯನದಲ್ಲಿ ತೊಡಗಿರುವವರು ಸಹ ತಮಗೆ ಅಗತ್ಯವಾದ ಪ್ರಮಾಣಪತ್ರವನ್ನು ತಮ್ಮ ಕಾಲೇಜಿನಲ್ಲಿ ನಡೆಯುವ ಪರೀಕ್ಷೆಯಲ್ಲಿ ಪಾಲ್ಗೊಂಡು ಪಡೆಯಬಹುದಾಗಿದೆ. ಇದಕ್ಕಾಗಿ ನೆಪ ಮಾತ್ರದ ನಿಗದಿತ ಶುಲ್ಕ ಮಾತ್ರ ಪಾವತಿಸಬೇಕಾಗುತ್ತದೆ ಎಂದು ಅವರು ಹೇಳಿದರು. ಕಾಲೇಜಿನ ಚಂದ್ರಶೇಖರ್, ಮನು ವಿಜಯ್, ಡಾ. ಸಚ್ಚಿದಾನಂದಮೂರ್ತಿ ಇದ್ದರು.